ಮುಖ್ಯಾಂತರವಾಗಿ ವಿಸರ್ಜಿಸಲಿಕ್ಕೆ ಅನುಕೂಲವಾಗುತ್ತದೆಂದು ಹೇಳಿದ್ದೇನೆ. ಈಗ ಅವರು ತೀರ್ಮಾನ ಮಾಡಿರತಕ್ಕಂಥಾದ್ದು ಮಹಾರಾಷ್ಟ್ರ, ಆಂಧ್ರಕ್ಕೆ ಸಂಬಂಧಪಟ್ಟಂತೆ. ಕೇಂದ್ರ ಸರಕಾರದವರೇ ಸ್ಥಾನಿಕ ಭಾಷೆಯಲ್ಲಿ ಕಾರ್ಯಕ್ರಮಗಳನ್ನು ಪ್ರತ್ಯೇಕವಾಗಿ ಕೊಡತಕ್ಕಂತಹ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದಾರೆ. ಕರ್ನಾಟಕದ ಬಗ್ಗೆ ಅವರು ಹೇಳಿದ ಆಶ್ವಾಸನೆ ಏನೆಂದರೆ ಬರುವ ವರ್ಷದವರೆಗೆ ಇದು ಸಾಧ್ಯವಾಗಬಹುದೆಂದು. ಇದಕ್ಕಿಂತ ಹೆಚ್ಚಿನ ಮಾಹಿತಿ ನನ್ನಲ್ಲಿ ಇಲ್ಲ.

ಶ್ರೀ ಎಂ. ರಘುಪತಿ.—ಬೆಂಗಳೂರು ದೂರದರ್ಶನವು ಏನು ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತಿದೆ ಅದರ ಗುಣಮಟ್ಟ ಬಹಳ ಕೀಳು ಮಟ್ಟದಲ್ಲಿದೆ ಜನರ ಅಭಿರುಚಿಯನ್ನು, ಜನರಲ್ಲಿ ಇಂಟರೆಸ್ಟ್ ಅನ್ನು ಯಾವ ರೀತಿ ಹುಟ್ಟಿಸಬೇಕೋ ಅದು ಸಾಧ್ಯವಾಗುತ್ತಿಲ್ಲ. ಈ ವಿಷಯದಲ್ಲಿ ಕೇಂದ್ರ ಸರಕಾರಕ್ಕೆ ಪತ್ರ ಬರೆಯುತ್ತೀರಾ ? ಎಂದು ಮಾನ್ಯ ಮಂಖ್ಯಿ ಮಂತ್ರಿಗಳನ್ನು ತಮ್ಮ ಮೂಲಕ ಕೇಳಲು ಇಚ್ಛಿಪಡುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಈ ವಿಚಾರದಲ್ಲಿ ಕೇಂದ್ರ ಸರಕಾರಕ್ಕೆ ನಾನು ಬರೆಯಂವುದಕ್ಕಿಂತಲೂ ಸಾರ್ವಜನಿಕರು ಬರೆದರೆ ಹೆಚ್ಚು ಪರಿಣಾಮಕಾರಿಯಾಗುತ್ತದೆ.

ಸಣ್ಣ ಉಳಿತಾಯದ ಬಗ್ಗೆ

೩೮೬ (ಬಿ) ಶ್ರೀ ಜಿ. ರಾಜುಗೌಡ, (ಹನೂರು).—ಮಾನ್ಯ ಸಾರಿಗೆ, ಸಣ್ಣ ಉಳಿತಾಯ ಹಾಗೂ ಬಂದೀಖಾನೆ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯ ಸರ್ಕಾರದ ಸಣ್ಣ ಉಳಿತಾಯದ ಬಗ್ಗೆ ಹೊಂದಿರುವ ನಿವ್ವಳ ಗುರಿ ಎಷ್ಟು.

ಆ) ಕೇಂದ್ರ ಸರ್ಕಾರದವರು ನಿಗದಿ ಮಾಡಿದ ಗುರಿಗಿಂತ ಹೆಚ್ಚಾಗಿ ಯಾವ ಯಾವ ರಾಜ್ಯಗಳು ಸಣ್ಣ ಉಳಿತಾಯದ ಗುರಿಯನ್ನು ಸಾಧಿಸಿವೆ.

ಇ) ಕೇಂದ್ರವು ಸಂಗ್ರಹಣೆಯಲ್ಲಿ ಶೇಕಡಾ ಎರಡರಷ್ಟನ್ನು ಅನುದಾನವಾಗಿ ನೀಡಿದರೆ ರಾಜ್ಯ ಸರ್ಕಾರಕ್ಕೆ ಎಷ್ಟು ಹಣ ದೊರಕುತ್ತದೆ?

ಶ್ರೀ ವೀರಣ್ಣ (ಸಣ್ಣ ಉಳಿತಾಯ, ಸಾರಿಗೆ ಮತ್ತು ಬಂದೀಖಾನೆಯ ರಾಜ್ಯಸಚಿವರು).—

ಅ) ೧೯೮೫-೮೬ನೇ ಸಾಲಿಗೆ ರೂ. ೨೧೧ ಕೋಟಿ, ೧೯೮೬-೮೭ ನೇ ಸಾಲಿಗೆ ರೂ. ೩೭೫ ಕೋಟಿ.

ಆ) (೧೯೮೫-೮೬ನೇ ಸಾಲಿನಲ್ಲಿ) ಕರ್ನಾಟಕ. ಪಂಜಾಬ್‌ರಾಷ್ಟ್ರ ಮತ್ತು ಬಿಹಾರ.

ಇ) ಕೇಂದ್ರವು ರಾಜ್ಯ ಸರ್ಕಾರಕ್ಕೆ ಸಣ್ಣ ಉಳಿತಾಯದ ಸಂಗ್ರಹಣೆ ಬಗ್ಗೆ ಅನುದಾನ ನೀಡಿರುವುದಿಲ್ಲ ನಿವ್ವಳ ಸಂಗ್ರಹಣೆಯು ಮೂರರಲ್ಲಿ ಎರಡು ಪಾಲಿನಷ್ಟು ದೀರ್ಘಾವಧಿ ಸಾಲವಾಗಿ ನೀಡುತ್ತದೆ.

ಶ್ರೀ ಜಿ. ರಾಜುಗೌಡ.—೧೯೫೫-೮೬ ರಲ್ಲಿ ಸಣ್ಣ ಉಳಿತಾಯದಿಂದ ರಾಜ್ಯಕ್ಕೆ ಎಷ್ಟು ಪಾಲು ಬಂದಿದೆ? ಕೇಂದ್ರ ಸರ್ಕಾರ ನಿಗಧಿ ಮಾಡಿದ್ದಕ್ಕಿಂತ ಹೆಚ್ಚಿಗೆ ತಾವು ಸಣ್ಣ ಉಳಿತಾಯದಲ್ಲಿ ಸಾಧನೆ ಮಾಡಿರುವುದರಿಂದ ರಾಜ್ಯಕ್ಕೆ ವಿಶೇಷವಾದ ಧನ ಕೊಡಬೇಕೆಂದು ತಾವು ಏನಾದರೂ ಕೇಳಿಕೊಂಡಿದ್ದೀರಾ?

ಶ್ರೀ ವೀರಣ್ಣ.—ಮಾನ್ಯ ಅಧ್ಯಕ್ಷರೇ, ಇಡೀ ದೇಶದಲ್ಲಿ ಕರ್ನಾಟಕ ರಾಜ್ಯ ಸಣ್ಣ ಉಳಿತಾಯದಲ್ಲಿ ಈ ಗ್ಯಾಸ್ ಮತ್ತು ನೆಟ್ ಮಧ್ಯೆ ಇರತಕ್ಕಂಥ ಶೇಕಡವಲ್ಲಿ ಮೊದಲನೆಯ ಸ್ಥಾನವನ್ನು ಪಡೆದಿದೆ. ಇದಕ್ಕೆ ೮೫-೮೬ ರಲ್ಲಿ ಸುಮಾರು ಒಂಭತ್ತು ಕೋಟಿ ರೂಪಾಯಿಗಳ ಬೋನಸ್ ಕರ್ನಾಟಕ ರಾಜ್ಯಕ್ಕೆ ಬಂದಿದೆ. ೧೯೮೬-೮೭ ರಲ್ಲಿ ರಾಜ್ಯ ಸರ್ಕಾರ ನಮಗೆ ಕೊಟ್ಟಂಥ ಗುರಿ ೧೫೦ ಕೋಟಿ ರೂಪಾಯಿಗಳು ೧೬೭ ಕೋಟಿ ರೂಪಾಯಿಗಳು ಈಗಾಗಲೇ ಬಂದಿದೆ ಇನ್ನು ೧೫ ಕೋಟಿ ರೂಪಾಯಿಗಳ ಅರಿಯರ್ಸ್ ನಮಗೆ ಕೇಂದ್ರ ಸರ್ಕಾರದಿಂದ ಬರಬೇಕಾಗಿದೆ.

ಶ್ರೀ ಜೆ. ರಾಜುಗೌಡ.—ಈ ಸಣ್ಣ ಉಳಿತಾಯದಲ್ಲಿ ಆರ್ಥಿಕ ಸಂಪನ್ಮೂಲಗಳಿಂದ ಅತ್ಯಾಕರ್ಷಕವಾದ ಬಡ್ಡಿ ಮತ್ತು ಆದಾಯ ತೆರಿಗೆ ವಸೂಲು ಮಾಡಲಿಕ್ಕೆ ತಾವು ಏನಾದರೂ ಕಾರ್ಯಕ್ರಮವನ್ನು ಜಾರಿಗೆ ತರಲಿಕ್ಕೆ ಶಿಫಾರಸ್ಸು ಮಾಡುತ್ತೀರಾ? ಮತ್ತು ಸಣ್ಣ ಉಳಿತಾಯದಿಂದ ರಾಜ್ಯಕ್ಕೆ ಬರತಕ್ಕಂಥ ಪಾಲಿನಿಂದ ಈ ವರ್ಷ ಆಯವ್ಯಯದ ಕೊರತೆಯನ್ನು ಎಷ್ಟರ ಮಟ್ಟಿಗೆ ನೀಗಿಸಂವುದಕ್ಕೆ ಸಾಧ್ಯವಾಗುತ್ತದೆ, ತಿಳಿಸುತ್ತೀರಾ?

ಶ್ರೀ ವೀರಣ್ಣ.—ಮಾನ್ಯ ಅಧ್ಯಕ್ಷರೇ, ಈ ಸಣ್ಣ ಉಳಿತಾಯದ ಯೋಜನೆಯಲ್ಲಿ ಹಣವನ್ನು ತೊಡಗಿಸುವುದರಿಂದ ಯಾವುದೇ ಬ್ಯಾಂಕಿನಲ್ಲಿ ಕೊಡದೇ ಇರತಕ್ಕಂಥ ಹೆಚ್ಚು ಬಡ್ಡಿ ಕೊಡುತ್ತಾರೆ. ಈ ಒಂದು ಹೊಸ ಯೋಜನೆಯನ್ನು ಕೇಂದ್ರ ಸರ್ಕಾರದವರು ಮಾಡಿದ್ದಾರೆ. ಅದು ಇಂದಿರಾ ವಿಕಾಸ ಪತ್ರ. ಅದರಲ್ಲಿ ೨೦ ಪರ್‌ಸೆಂಟ್ ಸಿಂಪಲ್ ಇಂಟರೆಸ್ಟ್ ಬಡ್ಡಿ ಕೊಡತಕ್ಕಂಥದ್ದು ಇದೆ ಮತ್ತು "ಮಾನ್ಯ ಸದಸ್ಯರು ಹೇಳುವಂಥ ಮಾತು ಈ ದಿವಸ ಬಹಳ ಜಾಸ್ತಿ ಸಂಖ್ಯೆಯಲ್ಲಿ ಸದಸ್ಯರಿದ್ದಾರೆ. ನಾನು ಅವರಿಗೆ ಧನ್ಯವಾದಗಳನ್ನು ಅರ್ಪಿಸಬೇಕಾಗಿದೆ, ನನ್ನ ಮನುವಿಗೆ ಓಗೊಟ್ಟು ಪ್ರತಿಯೊಬ್ಬರೂ ರೆಕರಿಂಗ್ ಡಿಪಾಸಿಟ್‌ನ್ನು ಇಟ್ಟಿದ್ದಾರೆ. ಇಡೀ ಭಾರತ ದೇಶದಲ್ಲಿ ವಿಧಾನಸಭೆಯ ಸದಸ್ಯರಂ ಸಣ್ಣ ಉಳಿತಾಯವನ್ನು ಮಾಡಿದ್ದಾರೆ. ನಾನು ಪುನಃ ಅವರುಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಐದು ವರ್ಷದಲ್ಲಿ ಯಾವುದೇ ಬ್ಯಾಂಕಿನಲ್ಲಿ ಹತ್ತು ಸಾವಿರ ರೂಪಾಯಿಗಳಿಗೆ ಇಪ್ಪತ್ತು ಸಾವಿರ ರೂಪಾಯಿ ಕೊಡಕ್ಕಂಥ ವ್ಯವಸ್ಥೆ ಎಲ್ಲಿಯೂ ಇಲ್ಲ ಮಾನ್ಯ ಮಂತ್ರಿಗಳೂ ಸಭಾ ಸದನದಲ್ಲಿದ್ದಾರೆ. ಪ್ರತಿಯೊಬ್ಬರೂ ಐದು ಸಾವಿರ ಹತ್ತು ಸಾವಿರ ರೂಪಾಯಿಗಳನ್ನು ಈ ಒಂದು "ಇಂದಿರಾ ವಿಕಾಸಪತ್ರ" ದಲ್ಲಿ ತೊಡಗಿಸುವುದರಿಂದ ರಾಜ್ಯಕ್ಕೆ ರಾಷ್ಟ್ರಕ್ಕೆ ಕೊಡುಗೆ ಕೊಟ್ಟ ಹಾಗೆ ಆಗುತ್ತದೆ ಎಂದು ಹೇಳುತ್ತಿದ್ದೇನೆ. ಎರಡನೇ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದ್ದಾರೆ, ಅದೇನೆಂದರೆ ಈ ರಾಜ್ಯದ ಖೋತಾ ಬಜೆಟನ್ನು ಯಾವ ರೀತಿ ತುಂಬಿಸಲಿಕ್ಕೆ ನೀವು ಕ್ರಮವನ್ನು ತೆಗೆದುಕೊಳ್ಳುತ್ತೀರಿ? ಎಂದು ಕೇಳಿದ್ದಾರೆ. ಮಾನ್ಯ ಅಧ್ಯಕ್ಷರೇ, ಈಗ ಎಲ್ಲಾ ಸಂಘಸಂಸ್ಥೆಗಳ ಮೂಲಕ ಸಾರ್ವಜನಿಕರಲ್ಲಿ ಈ ಸಣ್ಣ ಉಳಿತಾಯದ ಯೋಜನೆ ರಾಷ್ಟ್ರದ ಉಳಿತಾಯದ ಯೋಜನೆ ಜನತಾ ಆಂದೋಳನದಿಂದ ಆಗಬೇಕು. ಈ ರೀತಿ ಹೆಚ್ಚಿಗೆ ಹಣವನ್ನು ಕೂಡಿಸುವುದರ ಮೂಲಕ ೮೭–೮೮ಕ್ಕೆ ಮಂದಿನ ಸಾರಿಗೆ ಈ ಸಣ್ಣ ಉಳಿತಾಯದಿಂದ ಕನಿಷ್ಟ ೨೨೦ ಕೋಟಿ ರೂಪಾಯಿಗಳ ಸಣ್ಣ ಸಂಗ್ರಹಣೆ ಮಾಡಬೇಕು ಎಂದು ನಿರ್ದಿಷ್ಟ ಗುರಿ ಕೊಟ್ಟಿದ್ದಾರೆ. ೨೨೦ ಕೋಟಿ ರೂಪಾಯಿಗಳ ೨೬೦–೨೮೦ ಕೋಟಿ ರೂಪಾಯಿ ಬರುವ ರೀತಿಯಲ್ಲಿ ನಾವು ಕಾರ್ಯಕ್ರಮವನ್ನು ಹಾಕಿಕೊಂಡು ಅದರಿಂದ ಬರುವ ೪೦–೫೦ ಕೋಟಿ ರೂಪಾಯಿಯಂನ್ನು ಈ ಖೋತಾ ಬಜೆಟನ್ನು ಇದರಿಂದ ತುಂಬಿಸಲಿಕ್ಕೆ ಆಗುತ್ತದೆ. ಆ ರೀತಿ ನಾವು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಂ.

ಶ್ರೀ ಜೆ. ರಾಜುಗೌಡ.—ಈಗ ತಾವು ೮೬–೮೭ ರಲ್ಲಿ ೩೨೫ ಕೋಟಿ ರೂಪಾಯಿಗಳ ನಿವ್ವಳ ಸಂಗ್ರಹಣೆಯನ್ನು ಮಾಡಿದ್ದೀರಿ. ಅದರಲ್ಲಿ ೨/೩ಭಾಗವೆಂದರೆ ೨೫೦ ಕೋಟಿ ರೂಪಾಯಿ ತಾವು ದೀರ್ಘಾವಧಿ ಸಾಲದ ರೂಪದಲ್ಲಿ ಕೊಡುತ್ತೀರಿ ಈ ದೀರ್ಘಾವಧಿ ಸಾಲವನ್ನು ಯಾವರೀತಿಯಾಗಿ ಮರು ಪಾವತಿ ಮಾಡುತ್ತೀರಿ ತಿಳಿಸುತ್ತೀರಾ?

ಶ್ರೀ ವೀರಣ್ಣ.—ಈ ಸಾಲವನ್ನು ೨೫ ವರ್ಷದ ಕಂತುಗಳಲ್ಲಿ ತೀರಿಸಬೇಕಾಗಿದೆ. ಮತ್ತು ಮೊದಲನೆಯ ಐದು ವರ್ಷ ಯಾವುದೇ ರೀತಿಯಾದ ರಿಕವರಿ ಇರುವುದಿಲ್ಲ. ೧೯೮೪–೮೫ರಲ್ಲಿ ಇದರ ಮೇಲೆ ಒಂಭತ್ತು ಪರ್‌ಸೆಂಟ್ ಬಡ್ಡಿ ಇತ್ತು ಆ ನಂತರ ಹತ್ತೂವರೆ ಪರ್‌ಸೆಂಟ್ ಬಡ್ಡಿಯಾಯಿತು. ಈಗ ೧೨ ಪರ್‌ಸೆಂಟ್ ಮಾಡಿದ್ದಾರೆ. ೨೫ ವರ್ಷ ಆದ ನಂತರ ಈ ಸಾಲವನ್ನು ಮರುಪಾವತಿ ಮಾಡಬೇಕಾಗಿದೆ.

ಅಧ್ಯಕ್ಷರು.—ಪ್ರಶ್ನೆ ಸಂಖ್ಯೆ : ೨೪೩ (೬೪೨) ಮಾನ್ಯಸದಸ್ಯರು ಗೈರುಹಾಜರಿ.

ಸಂಳ್ಳ ವಿಧಾನಸಭಾ ಕ್ಷೇತ್ರದಲ್ಲಿ ಸಾರಿಗೆ ಸೌಲಭ್ಯಗಳಂ

೭೪೬ (ಬಿ) ಶ್ರೀ ಕೆ. ಕುಶಾಲ (ಸಂಳ್ಳ).— ಮಾನ್ಯ ಸಾರಿಗೆ, ಸಣ್ಣ ಉಳಿತಾಯಂ ಮತ್ತು ಬಂದೀಖಾನೆ ರಾಜ್ಯಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸಂಳ್ಳ ವಿಧಾನಸಭಾ ಕ್ಷೇತ್ರದಲ್ಲಿ ಶಾಲಾ ಕಾಲೇಜಂ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸೆ ಬಸ್ಸುಗಳನ್ನು ಓಡಿಸುವಂತೆ ಕೇಳಿಕೊಳ್ಳಲಾಗಿತ್ತೆ ?